ನ್ಯಾಯಾಲಯವು ತಡೆಯಾಜ್ಞೆ ನೀಡಿದೆ. ಮತ್ತೊಂದು ಕಾಮಗಾರಿಗೆ ಟೆಂಡರು ಕರೆಯಲಾಗಿದೆ. ಟೆಂಡರು ಸ್ವೀಕರಿಸಲು 24-2-97 ರಂದು ಕಡೆ ದಿನಾಂಕ ನಿಗದಿ ಪಡಿಸಲಾಗಿದೆ.

ನ್ಯಾಯಾಲಯವು ತಡೆಯಾಜ್ಞೆ ತೆರವು ಮಾಡಿದ ಕೂಡಲೇ ಕೆಲಸ ಪ್ರಾರಂಭಿಸಲಾಗುವುದು.

ವಿಷಯ:- ತುಮಕೂರು ಜಿಲ್ಲೆಯಲ್ಲಿ ಅಕ್ರಮ ಸಾಗುವಳಿ ಸಕ್ರಮಗೊಳಿಸುವ ವಿಚಾರ.

45(320)

ಶ್ರೀ ಆರ್. ನಾರಾಯಣ (ಬೆಳ್ಳಾವಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ದಿನಾಂಕ 19.9.91 ರವರೆಗೆ ತುಮಕೂರು ಜಿಲ್ಲೆಯಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಲುವಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು).

ಆ) ಈ ಪೈಕಿ ವಿಲೇವಾರಿ ಆಗಿರುವ ಅರ್ಜಿಗಳಲ್ಲಿ ತಿರಸ್ಕೃತ ಮತ್ತು ಮಂಜೂರಾದ ಪ್ರಕರಣಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು).

ಇ) ಮಂಜೂರಾತಿ ಪ್ರಕರಣಗಳಲ್ಲಿ ಇದುವರೆವಿಗೆ ಎಷ್ಟು ಜನರಿಗೆ ಸಾಗುವಳಿ ಚೀಟಿ ನೀಡಲಾಗಿದೆ;

ಈ) ಇನ್ನು ಸುಮಾರು ಶೇಕಡ 20 ರಷ್ಟು ಸಾಗುವಳಿದಾರರು ಅಕ್ರಮ ಸಾಗುವಳಿ ಮಾಡುತ್ತಿದ್ದು ಸಕಾಲದಲ್ಲಿ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ ಈ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ)

	ತಾಲ್ಲೂಕಿನ ಹೆಸರು	ಅರ್ಜಿಗಳ ಸಂಖ್ಯೆ
1.	ತುಮಕೂರು	04386
2.	ಗುಬ್ಬಿ	12082
3.	ಕುಣಿಗಲ್	08453
4.	ತಿಪಟೂರು	07359
5.	ತುರುವೇಕೆರೆ	11589
6.	ಚಿಕ್ಕನಾಯ್ಕನಹಳ್ಳಿ	15979

	ತಾಲ್ಲೂಕಿನ ಹೆಸರು	ಅರ್ಜಿಗಳ ಸಂಖ್ಯೆ
7.	ಮಧುಗಿರಿ	08380
8.	ಕೊರಟಿಗೆರೆ	04163
9.	ಶಿರಾ	13685
10.	ಪಾವಗಡ	04130
	ಒಟ್ಟು	90206

ಆ)

ತಾಲ್ಲೂಕಿನ ಹೆಸರು	ತಿರಸ್ಕೃತವಾದ ಅರ್ಜಿಗಳ ಸಂಖ್ಯೆ	ಮಂಜೂರಾದ ಅರ್ಜಿಗಳ ಸಂಖ್ಯೆ	ಬಾಕಿ
ತುಮಕೂರು	2112	2245	29
ಗುಬ್ಬಿ	2234	3400	6353
ಕುಣಿಗಲ್	2241	1935	4277
ತಿಪಟೂರು	2226	4958	175
ತುರುವೇಕೆರೆ	1105	5223	5261
ಚಿಕ್ಕನಾಯ್ಕನಹಳ್ಳಿ	5163	2175	8341
ಮಧುಗಿರಿ	2141	3179	3060
ಕೊರಟಗೆರೆ	0586	1884	1693
ಶಿರಾ	4535	0741	8379
ಪಾವಗಡ	1384	2006	835
ಒಟ್ಟು	23757	27746	38703

ಇ) 14,916 ಜನರಿಗೆ ಸಾಗುವಳಿ ಚೀಟಿ ನೀಡಲಾಗಿದೆ.

ಈ) ಬಂದಿದೆ.

ಉ) ನಿಗಧಿತ ಅವಧಿಯೊಳಗೆ ಅರ್ಜಿ ಸಲ್ಲಿಸದೇ ಇರುವವರಿಗೆ ಮತ್ತೊಮ್ಮೆ ಕಾಲಾವಕಾಶ ಮಾಡಿಕೊಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.